ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 29th August 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Purchase of Ginning Factory Equipment by the T.A.P.C.M. Society Ltd., Ranebennur

15. Sri N. L. BELLAD (Ranebennur).—

Will the Minister for Development be pleased to state :—

(*a*) whether it has come to the notice of the Government that an advance of Rs. 10,000 was made recently to a secondhand and useless ginning factory equipment by the President, Taluk Agricultural Produce Co-operative Marketing Society Ltd., Ranebennur ;

(*b*) if so, the action taken in the matter ?

Sri B. L. GOWDA (Deputy Minister for Co-operation).—

(*a*) The Chairman, Taluk Agricultural Produce Co-operative Marketing Society Ltd., Ranebennur has purchased 5 secondhand gins through Sri K. I. Davangeri at Rs. 2,500 per gin.

(*b*) Action is in progress.

ಶ್ರೀ ಎನ್. ಎಲ್. ಬೆಲ್ಲದ್.—ರಾಣಿಬೆನ್ನೂರು ತಾಲ್ಲೂಕಿನ ವ್ಯವಸಾಯೋತ್ಪಾದನಾ ಸಹಕಾರಿ ಮಾರಾಟ ಸಂಘದ ಅವ್ಯವಹಾರದ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದ್ದೆ. ಈ ಸೊಸೈಟಿಯಲ್ಲ ಒಂದು ವರ್ಷ 27 ಸಾವಿರ ರೂಪಾಯಿ ನಷ್ಟ ತೋರಿಸಲಾಗಿದೆ, ಇತ್ತೀಚೆಗೆ 39 ಸಾವಿರ ಖರ್ಚು ಮಾಡಿದರು, ಗೋಡೌನ್ ಅಡಿಗಲ್ಲು ಹಾಕಲು 12 ಸಾವಿರ ರೂಪಾಯಿ ಖರ್ಚುಮಾಡಿದ್ದಾರೆ, ಫರ್ಟಿಲೈಜರಿನ ಬಾಕಿ 3 ಲಕ್ಷ ಕೊಚ್ಚಿಲ್ಲ. ಹೀಗೆ ಅನೇಕ ರೀತಿಯ ಅವ್ಯವಹಾರವಿದ್ದರೂ ಅವನ್ನು ಕಂಡರೂ ಹಾರಿಸಿ ಉತ್ತರ ಕೊಡುತ್ತಿದ್ದಾರೆ. ಯಾವ ಕ್ರಮ ಈ ವಿಚಾರದಲ್ಲಿ ತೆಗೆದುಕೊಂಡಿದ್ದೀರಿ ಮತ್ತು ತೆಗೆದುಕೊಳ್ಳಲಿದ್ದೀರಿ ಎಂಬುದನ್ನು ಹೇಳುತ್ತೀರಾ ?

†ಶ್ರೀ ಬಿ. ಎಲ್. ಗೌಡ.—ಈಗಾಗಲೆ ಮಾನ್ಯ ಸದಸ್ಯರು ಕೇಳಿರುವ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ. ಸಂಬಂಧಪಟ್ಟ ಅಧಿಕಾರಿ ಮಂಡಲಿಯನ್ನು ಸೂಪರ್‌ಸೀಡ್ ಮಾಡಲಾಗಿದೆ. ಅವ್ಯವಹಾರ ನಡೆದಿರುವುದರ ತನಿಖೆಯಾಗುತ್ತಿದೆ. ಅದಕ್ಕೆ ಸಂಬಂಧಪಟ್ಟ ವರದಿ ಬಂದಮೇಲೆ ನೂಕ್ತ ಕ್ರಮ ಕಾನೂನಿನ ಪ್ರಕಾರ ತೆಗೆದುಕೊಳ್ಳುತ್ತೇವೆ.

Sri SIDDIAH KASHIMATH.—May I know whether tenders were called for while purchasing gin ?

Sri B. L. GOWDA.—No, Sir.

ಶ್ರೀ ಕೆ. ಎಚ್. ಪಾಟೀಲ್.—ಈ ಸೊಸೈಟಿಯಲ್ಲಿ ಸರಕಾರದಿಂದ ನಾಮಕರಣ ಮಾಡಲ್ಪಟ್ಟ ಅಸಿಸ್ಟೆಂಟ್ ರಿಜಿಸ್ಟ್ರಾರರು ಮತ್ತು ಡೈರೆಕ್ಟರಿಯವಾಗ ಮತ್ತು ಈ ರೀತಿ ಅಪವ್ಯವಹಾರ ನಡೆದಿರುವಾ , ಅಪಾದನೆಗಳಿಗೊಳಗಾಗಿರುವಾಗ ಅಸಿಸ್ಟೆಂಟ್ ರಿಜಿಸ್ಟ್ರಾರರನ್ನು ಏಕೆ ಸಸ್ಪೆಂಡ್ ಮಾಡ ಬಾರದು ? ಸರಕಾರಿ ಅಧಿಕಾರಿಯು ಮೇರೇಕೆ ಮೊದಲು ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಬಿ. ಎಲ್. ಗೌಡ.—ತಪ್ಪು ಯಾರೇ ಮಾಡಿರಲಿ, ಎಲ್ಲರಮೇಲೂ ನೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಬೋಳ ರಘುರಾಮಶೆಟ್ಟಿ.—ಈ ಮೆಷೀನ್ ತೆಗೆದುಕೊಳ್ಳುವಾಗ ಅಕ್ರಮ ನಡೆದಿರುವು ದೇನು ?

ಶ್ರೀ ಬಿ. ಎಲ್. ಗೌಡ.—ಅದನ್ನು ತೆಗೆದುಕೊಳ್ಳುವಾಗ ಸಾಮಾನ್ಯವಾಗಿ ಟೆಕ್ನಿಕಲ್ ಒಪೀನಿ ಯನ್ ತೆಗೆದುಕೊಳ್ಳಬೇಕು. ಅವರು ತೆಗೆದುಕೊಂಡಿಲ್ಲ. ಏಕೆ ತೆಗೆದುಕೊಂಡಿಲ್ಲ ಎಂದು ನೋಟೀಸ್ ಕೊಡಲಾಗಿದೆ. ಅದಕ್ಕೆ ಜವಾಬು ಬಂದಿಲ್ಲ.

ಶ್ರೀ ಎನ್. ಎಲ್. ಬೆಲ್ಲದ್.—5 ಸಾವಿರ ರೂಪಾಯಿಗಳಿಗೆ ಹೊಸದು ದೊರೆಯುವಾಗ 12 ಸಾವಿರ ಕೊಟ್ಟು ಸೆಕೆಂಡ್‌ಹ್ಯಾಂಡ್ ಸಾಮಾನನ್ನು ತೆಗೆದುಕೊಂಡಿದ್ದಾರೆ. ಇಂಥ ಅಕ್ರಮಗಳಿರು ವುದರ ಬ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದಕ್ಕೆ ಒಪ್ಪಿದ್ದೇನೆ. ಅನ್ಯಾಯವ ವ್ಯವಹಾರ ನಡೆದಿದೆ, ವ್ಯವಹಾರ ಸರಿ ಾಗಿಲ್ಲ. ಏಕೆ ಹಾಗಾಗಿದೆ ಎಂದು ನೋಟೀಸು ಕೊಡಲಾಗಿದೆ. ಜವಾಬು ಬಂದಮೇಲೆ, ತನಿ ಖೆಯ ವರದಿ ಬಂದಮೇಲೆ ನೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಸಂಗನಗೌಡ.—ಈ ಜಿನ್ ಖರೀದಿ ಸಲುವಾಗಿ ಸರ್ಕಾರದ ವತಿಯಿಂದ ಸಾಲ ಅಥವಾ ಗ್ರಾಂಟ್ ಕೊಟ್ಟಿದ್ದೀರಾ ? ಎಷ್ಟು ಕೊಟ್ಟಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಹತ್ತು ಸಾವಿರ ರೂಪಾಯಿ ಷೇರು ಬಂಡವಾಳ ಕೊಟ್ಟಿದ್ದೇವೆ.

Sri D. B. KALMANKAR.—You have been pleased to say that action will be taken. May I know whether you are going to take criminal action or civil action ?

Sri B. L. GOWDA.—I have already stated that the Board Management has been superseded and our officers are conducting enquiry. After the enquiry report is received, we will examine what kind of action we could take.

ಶ್ರೀ ಹಂಜಿ ಶಿವಣ್ಣ.—ಯಾವಾಗಲೂ ಸರ್ಕಾರದವರು ಇಂತಹ ತನಿಖೆ ಮಾಡುವಾಗ ಮೊದಲು ಬಹಳ ಜೋರಾಗಿ ನಡೆಸುತ್ತಾರೆ, ಕೊನೆಗೆ ಪರ್ಫಾರ್ಮನುಗಟ್ಟರೆ ಮಾಡಿ, ಅದನ್ನು ಸಣ್ಣದು ಮಾಡಿ ಕೈ ಬಿಡುತ್ತಾರೆ. ಆ ರೀತಿ ಮಾಡದೆ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

Sri B. L. GOWDA.—We are anxious to take action as early as possible.

ಶ್ರೀ ಕೆ. ಎಚ್. ರಾಗನಾಥ್.—ಸ್ವಾಮಿ, ಈ ಜಿನ್‌ನ ಚೇರ್ಮನ್‌ರು ಈಗ ಗದಗಿನಮಠದ ಶಿಷ್ಯ ರಾಗಿ ಹೋಗುವುದರಿಂದ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರಲ್ಲಾ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ? ನಾಳೆ ಅವರು ಸ್ವಾಮಿಗಳಾಗುತ್ತಾರೆ, ಅವರ ಮೇಲೆ ಹೇಗೆ ಕ್ರಮ ತೆಗೆದುಕೊಳ್ಳುತ್ತೀರಿ ? ಅವರೇನಾದರೂ ಆಸ್ತಿ ಬಿಟ್ಟಿದ್ದಾರೆಯೇ, ಹೇಗೆ ?

†Indicates that the remarks or speeches have not been revised by the member, concerned

ಶ್ರೀ ಬಿ. ಎಲ್. ಗೌಡ.—ಅವರು ಸ್ವಾಮಿ ಅಗುವುದಕ್ಕೂ ಸರ್ಕಾರಕ್ಕೂ ಸಂಬಂಧವಿಲ್ಲ. ಅವರ ಮೇಲೆ ಇರತಕ್ಕ ಅಪಾದನೆಗಳೇನಾದರೂ ರುಜುವಾತಾದರೆ ಅವರು ಎಲ್ಲೇ ಇರಲಿ ಕ್ರಮ ತೆಗೆದುಕೊಳ್ಳುತ್ತೇವೆ.

Supply of Diesel Oil Engine Pumpsets in each taluk of Bangalore District

27. Sri C. R. RANGE GOWDA (Magadi).—

Will the Minister for Agriculture be pleased to state :—

(*a*) number of Diesel Oil Engine Pumpsets of M/s. Ganga Precision Industries Limited, Coimbatore supplied to each one of the Taluks in Bangalore district since the last three years up to a convenient date (yearwar information may be furnished) ;

(*b*) of them, the number of sets that are in working condition ;

(*c*) whether the Government have received any complaints about the working condition of those pumpsets) ;

(*d*) if so, the action taken to help the ryots in the matter ?

Sri D. B. PAWAR (Deputy Minister for Agriculture).—

(*a*)—

Name of the Taluk	*By the Dept. of Agriculture*			*By Mysore State Co-op. Land Development Bank*	*By Mysore State Agro Industries. Corporation*
	1965-66	*66-67*	*67-68*	*1967-69*	*1967-68*
Bangalore South	...	...	1	...	...
Bangalore North	...	...	1	...	...
Dodballapur	...	...	3	...	...
Nelamangala	...	...	3	1	...
Magadi	...	7	4	...	...
Ramanagaram	...	...	4	...	1
Channapatna	...	9	4	...	...
Kanakapura	...	...	3	...	...
Hosakote	...	3	...	...	...
Devanahalli	...	...	2	...	...
Anekal	...	...	1	...	...
	...	19	26	1	1